# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | :: | 787 |
| ಸದಸ್ಯರ ಹೆಸರು | :: | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | :: | 21.02.2024 |
| ಉತ್ತರಿಸುವ ಸಚಿವರು | :: | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ತಾಲ್ಲೂಕಿನ ಹಳ್ಳದಕೇರಿ (ಕೆ) ಸರ್ವೆ ನಂ.52ರಲ್ಲಿ ಸುಮಾರು 72 ಎಕರೆ 17 ಗುಂಟೆ ಜಮೀನಿನಲ್ಲಿ ಕೆರೆ ಇರುವುದು ನಿಜವೆ; ಇದರಲ್ಲಿ ಸುಮಾರು ಎಕರೆ ಭೂಮಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | -ಬಂದಿದೆ-<br><br>ಬೀದರ ತಾಲ್ಲೂಕಿನ ಹಳ್ಳದಕೇರಿ (ಕೆ) ಗ್ರಾಮದ ಸ.ನಂ. 52ರಲ್ಲಿ ವಿಸ್ತೀರ್ಣ 72-17 ಎಕರೆ/ಗುಂಟೆ ಜಮೀನು ಕೆರೆ ಇರುತ್ತದೆ. ದಿನಾಂಕ:03.01.2023 ರಂದು ಸರ್ವೆ ಕಾರ್ಯ ಮಾಡಿದ್ದು, ಸದರಿ ಕೆರೆಯ ಒಟ್ಟು ವಿಸ್ತೀರ್ಣದ ಪೈಕಿ ವಿಸ್ತೀರ್ಣ 4-24 ಎಕರೆ/ಗುಂಟೆ ಜಮೀನು ಒತ್ತುವರಿಯಾಗಿರುತ್ತದೆ. |
| ಆ) | ಒತ್ತುವರಿ ಭೂಮಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಎಷ್ಟು ಒತ್ತುವರಿಯನ್ನು ತೆರವುಗೊಳಿಸಿದೆ. ಬಾಕಿ ಪ್ರಕರಣಗಳಲ್ಲಿ ವಿಳಂಬಕ್ಕೆ ಕಾರಣಗಳೇನು; | ಮಾರ್ಚ್ 2023 ಮಾಹೆಯಲ್ಲಿ ಸ.ನಂ. 52ರಲ್ಲಿ ಒತ್ತುವರಿಯಾದ 4-24 ಎಕರೆ/ಗುಂಟೆ ಪೈಕಿ 02-31 ಎಕರೆ/ಗುಂಟೆ ಜಮೀನನ್ನು ಅತಿಕ್ರಮಣ ಮಾಡಿ ಅನಧಿಕೃತವಾಗಿ ಕಾಂಪೌಂಡ್ ಗೋಡೆ ನಿರ್ಮಿಸಿರುವುದನ್ನು ನಗರಸಭೆ ವತಿಯಿಂದ ತೆರವುಗೊಳಿಸಲಾಗಿದೆ.<br><br>ಉಳಿದ 1-33 ಎಕರೆ/ಗುಂಟೆ ಒತ್ತುವರಿ ಜಮೀನನ್ನು ತೆರವುಗೊಳಿಸಲು ಕ್ರಮವಹಿಸಲಾಗುವುದು. |
| ಇ) | 2016 ರಲ್ಲಿ 1.23 ಎಕರೆ ಭೂಮಿ ಒತ್ತುವರಿಯಾಗಿದ್ದು, ಒತ್ತುವರಿ ಅಳತೆಗೆ ಕೆರೆಯಲ್ಲಿ ನೀರು ತುಂಬಿದೆ ಎಂದು ಸರ್ಕಾರ ತಪ್ಪು ಉತ್ತರ ನೀಡಿರುವುದು ಸರ್ಕಾರಕ್ಕೆ ಮನವರಿಕೆ ಆಗಿದೆಯೇ; | ಸದರಿ ಜಮೀನನ್ನು ದಿನಾಂಕ:29.06.2022 ರಂದು ಅಳತೆಗೆ ಹೋದಾಗ ಕೆರೆಯಲ್ಲಿ ಭಾಗಶಃ ನೀರು ತುಂಬಿದ್ದು ಅಳತೆ ಕಾರ್ಯ ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ, 2016 ರಂದು ಮಾಡಿರುವ ಅಳತೆಯ ಸ್ಕೆಚ್ ನಕಾಶೆಯನ್ನೇ ಸಲ್ಲಿಸಿ 1-23 ಎಕರೆ/ಗುಂಟೆ ಒತ್ತುವರಿ ವಿಸ್ತೀರ್ಣ ನಮೂದಿಸಿ ದಿನಾಂಕ:28.12.2022ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1152 ಕ್ಕೆ ಉತ್ತರ ಸಲ್ಲಿಸಲಾಗಿರುತ್ತದೆ. |

| | | |
|---|---|---|
| ಈ) | ತಪ್ಪು ಮಾಹಿತಿ ನೀಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಕಳೆದ 2022ರ ಡಿಸೆಂಬರ್‌ನಲ್ಲಿ ಸರ್ಕಾರಕ್ಕೆ ಆಗ್ರಹಿಸಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಬೀದರ್ ತಾಲ್ಲೂಕಿನ ಹಳ್ಳದಕೇರಿ(ಕೆ) ಗ್ರಾಮದ ಸ.ನಂ.52ರ ವಿಷಯವಾಗಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1152ಕ್ಕೆ ತಪ್ಪು ಮಾಹಿತಿ ನೀಡಿದ್ದು, ಸದರಿ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಕೆರೆಯಲ್ಲಿ ನೀರು ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ ಮೂರು ದಿನಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಹಾಗೂ ಒಂದು ವಾರದೊಳಗೆ ಅಳತೆ ಕಾರ್ಯ ಕೈಗೊಂಡು ವಾಸ್ತವಾಂಶದ ವರದಿಯನ್ನು ನೀಡುವಂತೆ ಮತ್ತು ತಪ್ಪು ಮಾಹಿತಿ ನೀಡಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಂದ ದಿನಾಂಕ:28.12.2022 ರಂದು ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ಇವರಿಗೆ ಅರೆ ಸರ್ಕಾರಿ ಪತ್ರ ಬರೆಯಲಾಗಿರುತ್ತದೆ.<br><br>ಮುಂದುವರೆದು, ಜಿಲ್ಲಾಧಿಕಾರಿಗಳ ವರದಿಯಂತೆ ಸದರಿ ಜಮೀನಿನಲ್ಲಿ ದಿನಾಂಕ:29.06.2022 ರಂದು ಅಳತೆಗೆ ಹೋದಾಗ ಜೂನ್ ಮಾಹೆಯಲ್ಲಿ ಮಳೆಯಿಂದಾಗಿ ಕೆರೆಯಲ್ಲಿ ಭಾಗಶಃ ನೀರು ಇರುವ ಪ್ರಯುಕ್ತ ಸರ್ವೆ ಕಾರ್ಯವನ್ನು ಮುಂದೂಡಲಾಗಿರುವುದು ಸರಿ ಇರುತ್ತದೆ. ಯಾವುದೇ ತಪ್ಪು ಮಾಹಿತಿ ನೀಡಿರುವುದಿಲ್ಲ. ಕಾರಣ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡಿರುವುದಿಲ್ಲ. ತದನಂತರ ದಿನಾಂಕ:03.01.2023 ರಂದು ಹಳ್ಳದಕೇರಿ ಗ್ರಾಮದ ಸ.ನಂ. 52ರಲ್ಲಿ ವಿಸ್ತೀರ್ಣ 72-17 ಎಕರೆ/ಗುಂಟೆ ಜಮೀನಿನ ಕೆರೆಯ ಸಂಪೂರ್ಣ ಅಳತೆ ಮಾಡಿ ಸ್ಕೆಚ್ ನಕಾಶೆಯನ್ನು ತಯಾರಿಸಿ ಸಲ್ಲಿಸಿದ್ದು, ಕೆರೆಯ ಒಟ್ಟು ವಿಸ್ತೀರ್ಣದಲ್ಲಿ 4-24 ಎಕರೆ/ಗುಂಟೆ ಒತ್ತುವರಿಯಾಗಿದ್ದು, ಈ ಪೈಕಿ 2-31 ಎಕರೆ/ಗುಂಟೆ ಒತ್ತುವರಿ ತೆರವುಗೊಳಿಸಿದ್ದು, ಉಳಿದ 1-33 ಎಕರೆ/ಗುಂಟೆ ಜಮೀನಿನ ಒತ್ತುವರಿ ತೆರವು ಕಾರ್ಯಾಚರಣೆ ಪ್ರಗತಿಯಲ್ಲಿದೆ. |
| ಉ) | ಕಳೆದ ಡಿಸೆಂಬರ್‌ನಲ್ಲಿ ಸರ್ವೆ ನಂ. 52ರಲ್ಲಿ 72 ಎಕರೆ 17ಗುಂಟೆ ಕೆರೆಯ ಭೂಮಿಯ ಅಳತೆ ಮಾಡಿದ ನಕಾಶೆಯನ್ನು ನೀಡಿದ್ದು ಅದನ್ನು ಪರಿಶೀಲನೆ ಮಾಡಿದಾಗ ಸುಮಾರು 15 ರಿಂದ 18 ಎಕರೆ ಕಡಿಮೆ ಇದ್ದು ಕಡಿಮೆಯಾದ ಜಮೀನನ್ನು ಯಾರು ಒತ್ತುವರಿ ಮಾಡಿಕೊಂಡಿರುತ್ತಾರೆ; ಈ ರೀತಿ ತಪ್ಪು ಮಾಹಿತಿ ನೀಡಲು ಕಾರಣವೇನು? ಒತ್ತುವರಿಯಾದ ಜಮೀನಿನ ವಿಸ್ತೀರ್ಣವೆಷ್ಟು? (ಮಾಹಿತಿ ನೀಡುವುದು) | ದಿನಾಂಕ:03.01.2023 ರಂದು ಸರ್ವೆ ಕಾರ್ಯ ಮಾಡಿದ ನಂತರ ಪರಿಶೀಲಿಸಲಾಗಿ, ಸದರಿ ಕೆರೆಯು 72-17 ಎಕರೆ/ಗುಂಟೆ ವಿಸ್ತೀರ್ಣ ಹೊಂದಿದ್ದು, ಈ ಪೈಕಿ ಖಾಸಗಿ ವ್ಯಕ್ತಿಗಳು ವಿಸ್ತೀರ್ಣ 04-24 ಎಕರೆ/ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ. 15 ರಿಂದ 18 ಎಕರೆ ವಿಸ್ತೀರ್ಣ ಕಡಿಮೆ ಇರುವುದು ಕಂಡುಬರುತ್ತಿಲ್ಲ. |

**ಆರ್‌ಡಿ 5 ಎಲ್‌ಜಿಐ 2024**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು